ಶ್ರೀ ಎಂ.ಎಸ್. ಕೃಷ್ಣನ್.—ನನಗೆ ಅರ್ಥವಾಗುವುದಿಲ್ಲ. ನಾವು ನೀವು ಸ್ನೇಹಿತರು ನಿಜ. ನಿಮ್ಮ ಬಗ್ಗೆ ಗೌರವ ಇದೆ. ಯಾವಾಗಲೂ ಗೌರವ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಮ್ಮ ತೀರ್ಮಾನಕ್ಕೆ ತಲೆಬಾಗುತ್ತೇವೆ, ನಮಗೆ ನಿಮ್ಮ ಬಗ್ಗೆ ಗೌರವ ಇದೆ. ಇನ್ನು ಮುಂದೆ ಕೌಲ್ ಅಂಡ್ ಶಕ್ದರ್ ಡಿಸಿಷನ್ಸ್ ಇದ್ದರೆ.....

(ಗೊಂದಲ)

MR. SPEAKER.—I will take your suggestions. I will take your experienced views.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನ್‌ವೆನ್‌ಷನ್ ಪ್ರಕಾರ Speaker has withheld the questions.

12-30 P.M.

MR. SPEAKER.—I request you to resume your seat. ನಾನು ನಿಮ್ಮನ್ನು ಕರೆದು I will take your views also.

ವರದಿಗಳನ್ನು ಒಪ್ಪಿಸುವುದು

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾನು ಅಧೀನ ಶಾಸನಾ ರಚನಾ ಸಮಿತಿಯ ಅನೇ ಮತ್ತು ಐನೇ ವರದಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅಧೀನ ಶಾಸನಾ, ರಚನಾ ಸಮಿತಿಯ ಅನೇ ಮತ್ತು ಐನೇ ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಬಿ. ಎಚ್. ಎಂಕಾನಾಯಕ್.—ಸನ್ಮಾನ್ಯ ಅಧ್ಯಕ್ಷರೇ, ನನ್ನ ಹೆಸರು ಕೂಡ ಸೂಚನೆ ಆಗಿತ್ತು, ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ನಿಮ್ಮ ಹೆಸರು ಆಗಲೇ ಬಂದು ಹೋಯಿತು, ಉತ್ತರ ಕೊಡಿಸುತ್ತೇನೆ. ನೀವು ಕುಳಿತುಕೊಳ್ಳಿ.

ಗಮನ ಸೆಳೆಯುವ ಸೂಚನೆ

ತುಮಕೂರು ಜಿಲ್ಲೆಯ ಪೊಲೇನಹಳ್ಳಿಯಲ್ಲಿ ಹರಿಜನ ಗಿರಿಜನ ಕುಟುಂಬ ದವರು ಸಾಂಕ್ರಾಮಿಕ ರೋಗದಿಂದ ಮೃತಪಟ್ಟಿರುವುದು.

ಅಧ್ಯಕ್ಷರು.—ಈಗ ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಹಾಗೂ ಶ್ರೀ ಬಿ ಲಕ್ಕಪ್ಪನವರು; ತಮ್ಮ ಸೂಚನೆಯನ್ನು ಕೇಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ ನಾನು ತುಮಕೂರು ಜಿಲ್ಲೆಯ ಪೊಲೇನಹಳ್ಳಿಯಲ್ಲಿ ಹರಿಜನ ಗಿರಿಜನ ವರ್ಗಕ್ಕೆ ಸೇರಿದ ಸುಮಾರು ೩೦ ಮಕ್ಕಳು ಸಾಂಕ್ರಾಮಿ ರೋಗದಿಂದ ಮೃತಪಟ್ಟಿರುವುದರಿಂದ ಉದ್ಭವಿಸಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ತತ್ಸಂಬಂಧವಾಗಿ ನಾನು ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಪೊಲೇನಹಳ್ಳಿಯ ಜನ ಸಂಖ್ಯೆ ೧೧೧೪ ಇದ್ದು ಅದರಲ್ಲಿ ೪೨೫ ಜನ ಹರಿಜನ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಆರು ವರ್ಷ ವಯಸ್ಸಿಗಿಂತ ಕೆಳಗಿನ ಮಕ್ಕಳ ಸಂಖ್ಯೆ ೧೦೨ ಇದ್ದು ಅದರಲ್ಲಿ ೪೪ ಮಕ್ಕಳು ಹರಿಜನ ಗುಂಪಿಗೆ ಸೇರಿದವರಾಗಿರುತ್ತಾರೆ.

ಇದೇ ಸಾಲಿನ ಜುಲೈ ತಿಂಗಳ ಮೊದಲನೆಯ ವಾರದಲ್ಲಿ ಮೇಲ್ಕಂಡ ಊರಿನ ಮಕ್ಕಳಲ್ಲಿ ದಢಾರ ಕಾಯಿಲೆಯ ಜಹ್ನೆ ಕಂಡು ಬಂದಿದ್ದರೂ ಅವರ ಪೋಷಕರು ತಿಳುವಳಿಕೆ ಇಲ್ಲದೆ ಕಾಯಿಲೆ ಇದ್ದ ಮಕ್ಕಳನ್ನು ವೈದ್ಯರಿಗೆ ಅಥವಾ ಆರೋಗ್ಯ ಕಾರ್ಯಕರ್ತರಿಗೆ ಸಕಾಲದಲ್ಲಿ ತೋರಿಸದೆ ಇದ್ದ ಕಾರಣ, ಇದನ್ನು ಪತ್ತೆ ಮಾಡಲು ಸಾಧ್ಯವಾಗಲಿಲ್ಲವೆಂದು, ಆದರೆ ಜುಲೈ ತಿಂಗಳ ಅಂತ್ಯದಲ್ಲಿ ಕೆಲವು ಮಕ್ಕಳು ಮೃತಪಟ್ಟ ಸುದ್ದಿ ಆರೋಗ್ಯ ಇಲಾಖೆಯ ಸಿಬ್ಬಂದಿಯವರ ಗಮನಕ್ಕೆ ಬಂದ ನಂತರ ಈ ಹಳ್ಳಿಯಿಂದ ೯ ಕಿ. ಮೀ. ದೂರದಲ್ಲಿರುವ ಕೊಡಿಗೇನಹಳ್ಳಿಯ ಪ್ರಾಥಮಿಕ ಆರೋಗ್ಯ ಘಟಕದ ವೈದ್ಯಾಧಿಕಾರಿಯವರು ಉಳಿದ ದುರ್ಬಲ ಮಕ್ಕಳಿಗೆ ಚಿಕಿತ್ಸೆ ಕೊಡುವ ವ್ಯವಸ್ಥೆ ಮಾಡಿ, ಳಳಿ ಇತರ ಮಕ್ಕಳಿಗೆ ದಢಾರ ವಿರುದ್ಧ ಲಸಿಕೆಯನ್ನು ಕೊಟ್ಟಿರುವರು. ಈ ಎಲ್ಲಾ ಪ್ರಕರಣಗಳನ್ನು ಸ್ಥಳೀಯವಾಗಿ ದಾಖಲೆ ಮಾಡಿದ್ದರೂ ಸಹ ಅವರು ತುಮಕೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಗೆ ತಡವಾಗಿ ವರದಿ ಸಲ್ಲಿಸಿರುವರು. ಈ ದಢಾರ ಕಾಯಿಲೆಗೆ ೨೯ ಮಕ್ಕಳು ತುತ್ತಾಗಿದ್ದು, ಅವರ ಪೈಕಿ ೧೬ ಮಕ್ಕಳು ಸಾವನ್ನಪ್ಪಿರುವರೆಂದೂ, ದಿನಾಂಕ ೧೬-೮-೧೯೮೭ ರಿಂದೀಚೆಗೆ ಸಾವಿನ ಪ್ರಕರಣಗಳು ಕಂಡು ಬಂದಿಲ್ಲವೆಂದು ವರದಿಯಾಗಿದೆ.

ದಿನಾಂಕ ೧೮-೮-೧೯೮೭ರ ಬಳಿಕ ತುಮಕೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಗೆ ಸುದ್ದಿ ದೊರಕಿದ ಪ್ರಕಾರ ಇತರ ಅಧಿಕಾರಿ ಹಾಗೂ ತಜ್ಞರನ್ನು ಈ ಹಳ್ಳಿಗೆ ಕಳುಹಿಸಿ ಮುಂಜಾಗ್ರತೆ ಹಾಗೂ ತಡೆಗಟ್ಟುವ ಕ್ರಮಗಳನ್ನು ಏರ್ಪಡಿಸಿದರು.

ಜಂಟಿ ನಿರ್ದೇಶಕರು (ಸಾಂಕ್ರಮಿಕ ರೋಗಗಳು), ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಅವರೊಡನೆ ಬೇಟಿ ನೀಡಿ ಇದಕ್ಕೆ ಬೇಕಾಗುವ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಏರ್ಪಾಡು ಮಾಡಿರುವರು.

ಈ ಘಟನೆಯನ್ನು ಸಕಾಲದಲ್ಲಿ ಪತ್ತೆ ಮಾಡಿ ವರದಿ ಸಲ್ಲಿಸಲು ವಿಳಂಬ ಮಾಡಿದ ಈ ಕೆಳಕಂಡ ಸಿಬ್ಬಂದಿಯವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಮತ್ತು ಅವರನ್ನು ಅಮಾನತ್ತಿನಲ್ಲಿಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಗೆ ಸೂಚನೆಗಳನ್ನು ಕೊಡಲಾಗಿದೆ.

೧) ಶ್ರೀಮತಿ. ಉಮಾದೇವಿ.
ಮಹಿಳಾ ಆರೋಗ್ಯ ಸಹಾಯಕಿ
ಚಿಕ್ಕದಲವಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರ
ಉಪಕೇಂದ್ರ, ಕೊಡ್ಲಾಪುರ

೨) ಶ್ರೀಮತಿ, ರತ್ನಮ್ಮ.
ಮಹಿಳಾ ಆರೋಗ್ಯ ಕಾರ್ಯಕರ್ತೆ
ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡ್ಲಾಪುರ

೩) ಶ್ರೀ ಲಕ್ಷ್ಮೀಪತಿ
ಹಿರಿಯ ಆರೋಗ್ಯ ಪರಿವೀಕ್ಷಕರು
ಪ್ರಾಥಮಿಕ ಆರೋಗ್ಯ ಕೇಂದ್ರ
ಕೊಡ್ಲಾಪುರ

ಇದೂ ಅಲ್ಲದೆ ಈ ಕೆಳಕಂಡ ವೈದ್ಯಾಧಿಕಾರಿಗಳನ್ನು ಅಮಾನತ್ತಿಡಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಅವರಿಂದ ಶಿಫಾರಸ್ಸು ಬಂದಿದ್ದು ಈ ಬಗ್ಗೆ ಕ್ರಮ ಕೈಕೊಳ್ಳಲಾಗಿದೆ.

೧) ಡಾ. ಸಿದ್ದಪ್ಪ
ಆರೋಗ್ಯ ಅಧಿಕಾರಿ
ಪ್ರಾಥಮಿಕ ಆರೋಗ್ಯ ಕೇಂದ್ರ
ಕೊಡಿಗೇನಹಳ್ಳಿ ಹಾಗೂ
ವೈದ್ಯಾಧಿಕಾರಿ ಪ್ರಭಾರ
ಪ್ರಾಥಮಿಕ ಆರೋಗ್ಯ ಕೇಂದ್ರ
ಕೊಡ್ಲಾಪುರ

೨) ಡಾ॥ರಾಮಕೃಷ್ಣಯ್ಯ ಶೆಟ್ಟಿ
ಸಹಾಯಕ ಜಿಲ್ಲಾ ಆರೋಗ್ಯ ಮತ್ತು
ಕುಟುಂಬ ಕಲ್ಯಾಣ ಅಧಿಕಾರಿ
ಮಧುಗಿರಿ

ಕೊಡಿಗೇನಹಳ್ಳಿಯ ಪ್ರಾಥಮಿಕ ಘಟಕದಲ್ಲಿ ಕೆಲಸ ಮಾಡುತ್ತಿರುವ ಡಾ॥ ಸಿದ್ದಪ್ಪನವರಿಗೆ ಷೋಕಾಸ್ ನೋಟಿಸನ್ನು ದಿನಾಂಕ ೨೨.೮.೮೭ ರಂದು ಕೊಟ್ಟು ಅವರ ತೀವ್ರ ಉದಾಸೀನತೆಯ ಬಗ್ಗೆ ವಿವರಣೆ ಕೇಳಲಾಗಿದೆ. ಈಗಾಗಲೇ ಇವರನ್ನು ಅಮಾನತ್ತಿನಲ್ಲಿಡಲಾಗಿದೆ.

ಇದರ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮಗಳು ಈ ಕೆಳಕಂಡಂತಿವೆ :

೧) ಜುಲೈ ತಿಂಗಳ ಮೂರನೇ ವಾರದಲ್ಲಿ ಈ ಹಳ್ಳಿಯಲ್ಲಿನ ಕಾಯಿಲೆಯ ಮಕ್ಕಳಿಗೆ ಮತ್ತು ಅವರ ತಾಯಿಂದಿರಿಗೆ ಕೊಡಿಗೇನಹಳ್ಳಿ ಮತ್ತು ತಿಂಗನಹಳ್ಳಿ ಮಂಡಲಿ ಪ್ರಧಾನರವರಿಂದ ಹಾಲಿನ ಮತ್ತು ಊಟದ ವ್ಯವಸ್ಥೆ ಮಾಡಲಾಗಿತ್ತು.

೨) ಈ ಪ್ರಕರಣಗಳಿಗೆ ಮತ್ತು ದುರ್ಬಲ ಮಕ್ಕಳ ಚಿಕಿತ್ಸೆಗೆ ಹೆಚ್ಚುವರಿ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

೩) ಜಿಲ್ಲೆಯ ಬಾಲವಿಕಾಸ ಅಧಿಕಾರಿಯವರಿಂದ ಇಂತಹ ಪ್ರಕರಣಗಳಿಗೆ ಮತ್ತು ದುರ್ಬಲ ಮಕ್ಕಳಿಗೆ ಹೆಚ್ಚುವರಿ ಸಮಾರಜನಕವುಳ್ಳ ಆಹಾರದ ಸರಬರಾಜು ಮಾಡಲಾಗಿದೆ.

೪) ಇತರ ಸ್ಥಳೀಯ ಮತ್ತು ಜಿಲ್ಲಾ ಮಟ್ಟದ ಸಂಘ ಸಂಸ್ಥೆಗಳವರಿಂದ ಹಾಲಿನ ಮತ್ತು ಆಹಾರದ ಸರಬರಾಜು ಮಾಡಲಾಗಿದೆ.

೫) ಸುತ್ತಮುತ್ತಲಿನ ಹಳ್ಳಿಗಳಲ್ಲಿ ತೀವ್ರತರ ನಿಗಾ ಮತ್ತು ತಪಾಸಣೆ ಇಡಲಾಗಿದೆ.

೬) ಇತರೆ ಮಕ್ಕಳಿಗೆ ಪಡಿತರ ವಿರುದ್ಧ ಲಸಿಕೆ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ.

೭) ತಿಳುವಳಿಕೆ ಕೊಡುವುದಕ್ಕೆ ತೀವ್ರ ರೀತಿಯ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

೮) ಮಕ್ಕಳ ತಜ್ಞರಿಂದ ವಿಶೇಷ ಸಲಹೆ ಹಾಗೂ ಚಿಕಿತ್ಸೆ ಬಗ್ಗೆ ಮೇಲ್ವಿಚಾರಣೆ ನಡೆಸಲಾಗುತ್ತಿದೆ.

೯) ದಿನಾಂಕ ೨೪-೮-೮೭ ರಂದು ಕೊಡಿಗೇನಹಳ್ಳಿಯ ಆರೋಗ್ಯ ಘಟಕದಲ್ಲಿ ಒಳರೋಗಿಗಳಾಗಿ ತಾತ್ಕಾಲಿಕವಾಗಿ ಸೇರಿಸಿದ್ದ ಎಲ್ಲಾ ಪ್ರಕರಣಗಳನ್ನು ಮತ್ತು ಇತರ ದುರ್ಬಲ ಮಕ್ಕಳನ್ನು ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ಸೇರಿಸಲಾಗಿದೆ.

ಈ ಸಂಬಂಧದಲ್ಲಿ ತಿಳಿಸುವುದೇನೆಂದರೆ, ಇಂತಹ ಘಟನೆಗಳು ನೆರೆ ರಾಜ್ಯವಾದ ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ೧೯೮೫ನೇ ಸಾಲಿನ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಕಾಣಿಸಿಕೊಂಡಿದ್ದು ೭೮ ಮಕ್ಕಳು ಇದಕ್ಕೆ ತುತ್ತಾಗಿ ಅವರ ಪೈಕಿ ೨೧ ಮಕ್ಕಳು ಸಾವಿಗೀಡಾಗಿದ್ದರೆಂದು ದಿನಾಂಕ ೧೧-೧೦-೮೫ರ "ಹಿಂದೂ" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಇದನ್ನು ಗಮನದಲ್ಲಿಟ್ಟುಕೊಂಡು ದಿನಾಂಕ ೪-೧೧-೮೫ ರಂದು ಹೊರಡಿಸಿದ ಸುತ್ತೋಲೆಯಲ್ಲಿ ಬಹಳ ಎಚ್ಚರಿಕೆಯಿಂದ ಇಂತಹ ಪ್ರಕರಣಗಳನ್ನು ಗಮನಿಸಬೇಕೆಂದು ಸೂಚನೆಗಳನ್ನು ನೀಡಲಾಗಿದೆ.

ಶ್ರೀ ಬಿ. ಲಕ್ಕಪ್ಪ.....ಮಾನ್ಯ ಅಧ್ಯಕ್ಷರೇ, ನಾನು ತುಮಕೂರು ಜಿಲ್ಲೆಯ ಶಾಸಕನಾಗಿ ದಿನಾಂಕ ೨೨-೮-೧೯೮೭ ರಂದು ಈ ಒಂದು ಗ್ರಾಮಕ್ಕೆ ಭೇಟಿ ಕೊಟ್ಟಿದ್ದೆ. ಆ ವೇಳೆಯಲ್ಲಿ ಸುಮಾರು ೮೭ ಹರಿಜನ ಕುಟುಂಬಗಳಿವೆ. ಈ ಪಡಿತರ ಕಾಯಿಲೆಗೆ ೧೬ ಮಕ್ಕಳು ತುತ್ತಾಗಿ ಸಾವನ್ನಪ್ಪಿವೆ ಎಂದು ಇಲ್ಲಿ ಹೇಳಿದ್ದೀರಿ. ಆದರೆ ಅದು ಸರಿಯಲ್ಲ. ಈ ಖಾಯಿಲೆಯಿಂದ ೨೦ ಮಕ್ಕಳು ಸಾವನ್ನಪ್ಪಿವೆ. ಈ ಎಲ್ಲಾ ಮಕ್ಕಳು ಸಹ ಹರಿಜನ ಗುಂಪಿಗೆ ಸೇರಿದ ಮಕ್ಕಳಾಗಿವೆ. ಈಗ ಈ ಖಾಯಿಲೆ ಬಂದಿರುವ ಸುಮಾರು ೪೨ ಮಕ್ಕಳನ್ನು ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಸೇರಿಸಲಾಗಿದೆ. ಈ ಒಂದು ಗ್ರಾಮ ಕೊಡಿಗೇನಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೇರಿದೆ ಆದರೆ ಅಲ್ಲಿ ಆರೋಗ್ಯಾಧಿಕಾರಿ ಇಲ್ಲ. ಈ ಒಂದು ಗ್ರಾಮದಲ್ಲಿ ಕಳೆದ ೬ ವರ್ಷಗಳಿಂದ ಮಳೆ ಆಗಿಲ್ಲ. ಪೌಷ್ಟಿಕ ಆಹಾರದ ಕೊರತೆಯ ಕಾರಣದಿಂದ ಅಲ್ಲಿನ ಮಕ್ಕಳು ಈ ಖಾಯಿಲೆಗೆ ತುತ್ತಾಗಿವೆ. ಇದರ ಜೊತೆಗೆ ಅಲ್ಲಿನ ಜನರಿಗೆ ಯಾವುದೇ ರೀತಿಯಾ

ಕೆಲಸವನ್ನು ಸರ್ಕಾರದವರು ಒದಗಿಸಿಲ್ಲ. ಈಗ ಅಲ್ಲಿ ಪರಿಹಾರದ ಕೆಲಸಗಳನ್ನು ಕೈಕೊಳ್ಳುವುದಕ್ಕೆ ಬದಲು ಈ ಹಿಂದೆಯೇ ಕೈಕೊಂಡಿದ್ದರೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿತ್ತು. ಅಷ್ಟೇ ಅಲ್ಲ, ಈಗ ಸತ್ತಿರುವ ಮಕ್ಕಳ ಪ್ರಾಣಪಣ್ಣು ಸಹ ಉಳಿಸಬಹುದಾಗಿತ್ತು. ಇದರ ಜೊತೆಗೆ ಈ ಗ್ರಾಮದಲ್ಲಿ ಈಗ ಬಂದಿರುವ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವಂಥ ಕೆಲಸ ಆಗಿಲ್ಲ. ಈ ಗ್ರಾಮಕ್ಕೆ ಹೋಗು ಪವರು ತಮ್ಮ ಮೂಗನ್ನು ಮುಚ್ಚಿಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ಸರ್ಕಾರ ಅಲ್ಲಿಗೆ ಆರೋಗ್ಯಾಧಿಕಾರಿಯನ್ನು ನೇಮಕ ಮಾಡದ ಕಾರಣ ಇಷ್ಟೆಲ್ಲಾ ಅನಾಹುತಗಳು ಅಲ್ಲಿ ನಡೆದಿದೆ. ಆ ಗ್ರಾಮದಲ್ಲಿ ಸ್ಯಾನಿಟೇಷನ್ ವ್ಯವಸ್ಥೆ ಚೆನ್ನಾಗಿಲ್ಲ. ಈ ಕಾರಣದಿಂದಲೇ ಅಲ್ಲಿ ಸಾಂಕ್ರಾಮಿಕ ರೋಗ ಹರಡಿರುವುದು. ಇದರ ಜೊತೆಗೆ ಪೌಷ್ಟಿಕ ಆಹಾರದ ಕೊರತೆ ಸಹ ಒಂದು ಕಾರಣವಾಗಿದೆ. ಈಗ ಅಲ್ಲಿ ಆರು ವರ್ಷ ವಯಸ್ಸಿಗಿಂತ ಕೆಳಗಿನ ಮಕ್ಕಳು ೧೦೨ ಇದ್ದು, ಆ ಮಕ್ಕಳು ಸರಿಯಾಗಿ ನಡೆದಾಡುವ ಸ್ಥಿತಿಯಲ್ಲಿ ಸಹ ಇಲ್ಲ. ಆ ಮಕ್ಕಳ ದೇಹಗಳಲ್ಲಿ ಕೇವಲ ಮೂಳೆ ಮತ್ತು ಚರ್ಮ ಮಾತ್ರ ಉಳಿದು ಕೊಂಡಿದೆ. ಈ ೧೦೨ ಮಕ್ಕಳ ಪೈಕಿ ಳಳ ಮಕ್ಕಳು ಹರಿಜನ ಗುಂಪಿಗೆ ಸೇರಿದವರಾಗಿರುತ್ತಾರೆ. ಈ ಎಲ್ಲ ಮಕ್ಕಳಿಗೂ ಸರ್ಕಾರದವರು ಪೌಷ್ಟಿಕ ಆಹಾರವನ್ನು ಒದಗಿಸಬೇಕು. ಈ ಮಕ್ಕಳಿಗೂ ಸಹ ದಢಾರ ಕಾಯಿಲೆ ಬರದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಕೊಳ್ಳಬೇಕು. ಈ ದಢಾರ ರೋಗ ಬಂದರೆ ಸಾಯುವುದು ಅವರೂಪ. ಆದರೂ ಅಲ್ಲಿ ಮಕ್ಕಳು ಪೌಷ್ಟಿಕ ಆಹಾರದ ಕೊರತೆಯು ಕಾರಣ ದಿಂದ ಈ ಖಾಯಿಲೆಗೆ ತುತ್ತಾಗಿ ಸಾವನ್ನಪ್ಪಿವೆ. ಇನ್ನು ಮುಂದೆಯಾದರೂ ಸಹ ಅಲ್ಲಿನ ಜನರಿಗೆ ಖಾಯಂ ಆಗಿ ಕೂಲಿ ಕೆಲಸ ಒದಗಿಸಬೇಕು. ಅಲ್ಲಿನ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸಬೇಕು ಮತ್ತು ಆ ಗ್ರಾಮದಲ್ಲಿ ಸರಿಯಾದ ಸ್ಯಾನಿಟೇಷನ್ ವ್ಯವಸ್ಥೆ ಆಗಬೇಕು. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬುದನ್ನು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಸರ್ಕಾರದವರು ಮೊದಲೇ ಅಲ್ಲಿ ಕ್ರಮ ತೆಗೆದು ಕೊಂಡಿದ್ದರೆ ಅಲ್ಲಿನ ಮಕ್ಕಳಿಗೆ ದಢಾರ ಕಾಯಿಲೆ ಬರುವುದನ್ನು ತಪ್ಪಿಸಬಹುದಾಗಿತ್ತು ಎಂದು ಹೇಳಿದರು. ಆದರೆ ಇಂತಹ ಒಂದು ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಹಳ್ಳಿಯಲ್ಲಿ ನಡೆದು ಸುಮಾರು ೨೧ ಮಕ್ಕಳು ಸಾವಿಗೀಡಾಗಿರುವುದು ನಮಗೆ ತಿಳಿದುಬಂದಿದೆ. ಈ ಒಂದು ಕಾರಣದಿಂದ ಈ ಬಗ್ಗೆ ಮುನ್ನೆಚ್ಚರಿಕೆ ಕ್ರಮ ಕೈಕೊಳ್ಳಬೇಕೆಂದು ನಾನು ಎಲ್ಲಾ ಅಧಿಕಾರಿಗಳಿಗೂ ತಿಳಿಸಿದ್ದೇನೆ. ಶಾಸಕ ರಾದಂಥ ಮಾನ್ಯ ರಾಜವರ್ಧನ್‌ರವರು ಆ ಸ್ಥಳಕ್ಕೆ ಹೋಗಿ ಆ ಜನರನ್ನು ವಿಚಾರ ಮಾಡಲಾಗಿ, ಅವರು ದಢಾರ ಅಂದರೆ ಮೂಢನಂಬಿಕೆಯಿಂದ ಪ್ರಾರಂಭವಾಗಿ ಬಂದಿದೆ ಎಂದು ಡಾಕ್ಟರ್ಸ್ ಮತ್ತು ಆರೋಗ್ಯ ಕಾರ್ಯಕರ್ತರನ್ನು ಒಳಗಡೆ ಸೇರಿಸದೆ ಇದ್ದಾರೆ. ಬಹುಶಃ ಶ್ರೀಮತಿ ನಾಗರತ್ನಮ್ಮನವರಿಗೂ ಸಹ ಗೊತ್ತಿದೆ. ಹಳ್ಳಿಗಳಲ್ಲಿ ದಢಾರ, ಪಿಡುಬು ಬಂದಾಗ ಬೇವಿನಸೊಪ್ಪು ಕಟ್ಟುವುದು, ಮಾರಿಗೆ ಹರಕೆ ಹೊತ್ತುಕೊಳ್ಳುವುದು, ಎಳನೀರು ಕುಡಿಸುವುದು ಪದ್ಧತಿ. ನನ್ನ ಊರಿನಲ್ಲೂ ಇಂಥಾದ್ದನ್ನು ಅನುಭವಿಸಿದ್ದೇನೆ. ಆದ್ದರಿಂದ ಸಾಧ್ಯವಾದ ಮಟ್ಟಿಗೆ ಜನಗಳಿಗೆ ವಿಚಾರ ತಿಳಿಸಬೇಕಾಗುತ್ತದೆ. ದಢಾರ ವಾಸಿಯಾಗತಕ್ಕಂಥಾದ್ದು, ಅದಕ್ಕೆ ಲಸಿಕೆ ಕೊಡತಕ್ಕಂಥಾದ್ದು ಇದೆ ಎಂದು ಸಂಬಂಧಪಟ್ಟ ಡಾಕ್ಟರ್ಸ್ ತಿಳುವಳಿಕೆ ಕೊಡಬೇಕು. ಆದರೆ ಅಲ್ಲಿ ಪೋಷಕರು ವಿಚಾರ ತಿಳಿಸದೇ ಇದ್ದುದರಿಂದ ಆರೋಗ್ಯ ಕಾರ್ಯಕರ್ತರಾಗಲಿ, ಡಾಕ್ಟರ್ಸ್ ಆಗಲಿ ತಕ್ಷಣ ಹೋಗುವುದಕ್ಕೆ ಆಗಲಿಲ್ಲ. ಸಾವನ್ನು ಅಪ್ಪಿದ ಮೇಲೆ ಹೋಗಿದ್ದರು. ಆದರೂ ನಿರ್ಲಕ್ಷ್ಯ ಮಾಡಿದ್ದಕ್ಕೋಸ್ಕರ ಕ್ರಮ ತೆಗೆದುಕೊಂಡಿದ್ದೇವೆ. ಐಸಿಡಿಸಿ ಪ್ರೋಗ್ರಾಂ ಇಲ್ಲದೇ ಇರುವ ಕಡೆ ಪೌಷ್ಟಿಕ ಆಹಾರ ಕೊಡುವುದಕ್ಕೆ ಬರುವುದಿಲ್ಲ. ಐಸಿಡಿಸಿ ಪ್ರೋಗ್ರಾಂ ಪಧುಗಿರಿ ತಾಲ್ಲೂಕಿನಲ್ಲಿ ಈಗ ಇಲ್ಲ. ಇನ್ನೊಂದು ಸಾರಿ ಐಸಿಡಿಸಿ ಪ್ರೋಗ್ರಾಂ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡತಕ್ಕಂಥ ಕಾಲದಲ್ಲಿ ಈ ಕಡೆಯೂ ಮಾಡಬೇಕು ಎಂದು ಕೇಳಿಕೊಳ್ಳುತ್ತೇವೆ. ಆಹಾರಧಾನ್ಯಗಳು ಇಲ್ಲದೇ ಇರುವ ಕಡೆ ಕ್ಷಾಮ ಪರಿಹಾರ ಕಾರ್ಯಕ್ರಮದ ಅಂಗವಾಗಿ ಆಯಾ ಮಂಡಲ ಪಂಚಾಯಿತಿಗಳಲ್ಲಿ ಕಾಳುಗಳನ್ನು ಕೊಟ್ಟು ಕೆಲಸ ಮಾಡಿಸಬೇಕು ಎಂದು ಆದೇಶ ಕೊಟ್ಟಿದ್ದೇವೆ. ಆದರೆ ಎಷ್ಟು ವೇಗದಲ್ಲಿ ಆಗಬೇಕಾಗಿತ್ತೋ ಅಷ್ಟು ವೇಗದಲ್ಲಿ ಆಗುತ್ತಾ ಇಲ್ಲ. ನನ್ನ ಜಿಲ್ಲೆಯಲ್ಲೂ ಅದೇ ರೀತಿಯಾಗಿದೆ. ಈ ಕೆಲಸವನ್ನು ಪ್ರಾರಂಭ ಮಾಡಿ ಜನಗಳಿಗೆ ಆಹಾರ ಕೊಟ್ಟರೆ ಸ್ವಲ್ಪವಾದರೂ ನೆರವಾಗಬಹುದು. ಆದರೂ ಕೂಡ ನಮ್ಮ ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಜಾಸ್ತಿ ಇದೆ. ಐಸಿಡಿಸಿ ಪ್ರೋಗ್ರಾಂ ಇದೆ. ಈ ಪ್ರೋಗ್ರಾಂನ್ನು ಮುಂದುವರಿಸಿಕೊಂಡು ಹೋಗಿದ್ದೇವೆ. ಜನಗಳಿಗೆ ಇನ್ನೂ ಹೆಚ್ಚು ತಿಳಿವಳಿಕೆ ಕೊಡುತ್ತೇವೆ. ೪ ವರ್ಷಗಳಿಂದ ಸತತವಾಗಿ ಮಳೆ ಇಲ್ಲದೇ ತೊಂದರೆ ಯಾಗಿದೆ. ಆಧ್ರಪ್ರದೇಶದ ಗಾಳಿ ಬೀಸಿದೆ. ಆ ಭಾಗದಲ್ಲಿ ರೋಗ ಶುರುವಾಗಿದೆ. ಅಲ್ಲಿನ ಪರಿಸರ ವನ್ನು ನೋಡಿಕೊಂಡು ಕೆಲಸ ಮಾಡಬೇಕಾಗಿ ಬಂದಿದೆ. ಮಾನ್ಯ ಲಕ್ಕಪ್ಪನವರಿಗೆ ಗೊತ್ತಿದೆ. ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಾಗ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುತ್ತೇವೆಂದು ಹೇಳುತ್ತೇನೆ

ಶ್ರೀ ಬಿ. ಲಕ್ಕಪ್ಪ.—ನಿನ್ನೆ ತಾರೀಖು ಜಿಲ್ಲಾ ಆರೋಗ್ಯಾಧಿಕಾರಿ ಅಲ್ಲಿ ಹೋಗಿದ್ದಾರೆ. ತಕ್ಷಣ ಔಷಧ ಒದಗಿಸುವುದಕ್ಕೆ, ಆಹಾರ ಒದಗಿಸುವುದಕ್ಕೆ ಅವರ ವ್ಯಾಪ್ತಿಯಲ್ಲಿ ಕಂಟೆಂಜೆನ್ಸಿ ಫಂಡ್‌ನ ವ್ಯವಸ್ಥೆಯಾಗಲಿ ಇಲ್ಲ. ಆ ವ್ಯವಸ್ಥೆ ಇದ್ದಿದ್ದರೆ ತಕ್ಷಣಕ್ಕೆ ಆಹಾರ ಒದಗಿಸುವುದಕ್ಕೆ ಮತ್ತು ಔಷಧಿ ಒದಗಿಸುವುದಕ್ಕೆ ಅನುಕೂಲವಾಗುತ್ತಿತ್ತು. ಅವರ ಕೈಯಲ್ಲಿ ಹಣದ ಅನುಕೂಲವಿದ್ದರೆ ಕೊಡುವುದಕ್ಕೆ ಸಹಾಯವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಔಷಧಿ ಇಲ್ಲ ಎಂದು ಹೇಳುವ ಹಾಗಿಲ್ಲ. ೪೦ ಪರ್ಸೆಂಟ್ ಔಷಧಿಗಳನ್ನು ನೀರವಾಗಿ ಜಿಲ್ಲಾ ಪರಿಷತ್ತಿನವರು ಆಯಾ ಘಟಕಗಳಿಗೆ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಬಿ. ಲಕ್ಕಪ್ಪ.—ಜಿಲ್ಲಾ ಪರಿಷತ್ತನ್ನು ನಂಬಿಕೊಂಡರೆ ಯಾರ ಪ್ರಾಣವೂ ಉಳಿಯುವುದಿಲ್ಲ.

ಶ್ರೀ ಬಿ. ರಾಚಯ್ಯ.—ವೈದ್ಯಕೀಯ ಇಲಾಖೆಗೆ ಸಂಬಂಧಪಟ್ಟ ಆರೋಗ್ಯ ಘಟಕಗಳಿಗೆ, ಪಿ.ಹೆಚ್.ಸಿ.ಗಳಿಗೆ ಬೇಕಾಗಿರತಕ್ಕಂಥ ಔಷಧಿಗಳನ್ನು ಕೊಂಡುಕೊಳ್ಳುವುದಕ್ಕೆ ಈಗಾಗಲೇ ಹಣ ಬಿಡುಗಡೆ ಮಾಡಿದ್ದೆವೆ. ಅವರು ಕಾರ್ಯ ಮಾಡುತ್ತಾ ಇದ್ದಾರೆ. ಮತ್ತೆ ಜಿಲ್ಲಾ ಮಟ್ಟದಲ್ಲಿ ಇರುವುದಿಲ್ಲ, ಅಲ್ಲಿಗೆ ಇಲ್ಲಿನ ಕೇಂದ್ರದಿಂದ ಸಪ್ಲೈ ಮಾಡುತ್ತಾ ಇದ್ದೇವೆ. ಲಸಿಕೆಯಾಗಲೀ ಸಂಬಂಧಪಟ್ಟದ್ದು ಎಲ್ಲವನ್ನೂ ಕೊಡುತ್ತಾ ಇದ್ದೇವೆ. ನಾನು ಅಲ್ಲಿಗೆ ಹೋಗಿಲ್ಲ, ಹೋಗಿಬರುತ್ತೇನೆ. ಜೊತೆಗೆ ಇನ್ನೂ ಅನುಕೂಲ ಕಲ್ಪಿಸಲು ಸಾಧ್ಯವಾದರೆ ಮಾಡುತ್ತೇನೆ.

ನಂದಿನಿ ಬಡಾವಣೆಯಲ್ಲಿ ಅಧಿಕೃತವಾಗಿ ಕಟ್ಟಿದ ಮನೆಗಳನ್ನು ಹೊಡೆದುಹಾಕಿರುವುದು

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ, ಚಾರಕ ಬಂಡೆ ಕಾವಲ್ ಸರ್ವೆ ನಂ. ೧೧, ೧೨ ಮತ್ತು ೧೪ರಲ್ಲಿ ನಂದಿನಿ ಬಡಾವಣೆಯನ್ನು ಸ್ಥಾಪಿಸಿದ್ದು, ಅಲ್ಲಿ ಅಧಿಕೃತವಾಗಿ ಕಟ್ಟಿದ ಮನೆಗಳನ್ನು ಹೊಡೆದು ಹಾಕಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ವಿವರಣೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿಷಯ ಏನು ಎನ್ನುವುದು ಸದನಕ್ಕೆ ಗೊತ್ತಾಗಬೇಕು.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರು ಓದಿ ಎಂದರೆ ಓದುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಸದನಕ್ಕೆ ಗೊತ್ತಾಗಬೇಕು. ನಿಯಮಾವಳಿಯಲ್ಲಿಯೂ ಇದೆ.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡಬಯಸುತ್ತೇನೆ.

ಕೊಳಚೆ ನಿರ್ಮೂಲನಾ ಮಂಡಳಿಯು ಕೊಳಚೆ ನಿವಾಸಿಗಳ ಪುನರ್‌ವಸತಿಗಾಗಿ ೫೯ ಎಕರೆ ೨೮ ಗುಂಟೆ ವಿಸ್ತೀರ್ಣದ ಲಗ್ಗೆರೆ ಗ್ರಾಮದ ೧೧ ಮತ್ತು ೧೨ನೇ ಸರ್ವೇ ನಂಬರಿನ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ ೧೮-೧೦-೧೯೮೫ರಂದು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಪಡೆದಿರುತ್ತದೆ.

ಈ ಜಮೀನು ಆಗಿನಿಂದಲೂ ಮಂಡಳಿಯು ಸ್ವಾಧೀನದಲ್ಲಿದ್ದು ಕೆಲವು ರಸ್ತೆಗಳನ್ನು ನಿರ್ಮಿಸಿರುವುದಲ್ಲದೆ, ಜಮೀನಿನ ಪಶ್ಚಿಮ ಭಾಗದಲ್ಲಿ ೨೪೦ ಮನೆಗಳನ್ನೂ ಮಂಡಳಿಯು ನಿರ್ಮಿಸಿರುತ್ತದೆ. ಹಿಂಗಿನ್ದರೂ ಕೂಡ ಕೆಲವು ಸ್ಥಳೀಯರು ಗಂಪುಗೂಡಿ ಮಂಡಲಿಯ ಜಮೀನಿಗೆ ದೌರ್ಜನ್ಯದಿಂದ ಅತಿಕ್ರಮಣ ಮಾಡಿ ಮನೆಗಳನ್ನು ನಿರ್ಮಿಸಿ ಆ ಜಮೀನೇ ತಮಗೆ ಸೇರಿದ ಚಾರಕ ಬಂಡೆ ಕಾವಲಿನ ಒಂದನೇ ಸರ್ವೇ ನಂಬರಿನ ಜಮೀನೆಂದು ಹೇಳುತ್ತಿದ್ದರು. ಈ ರೀತಿ ಅಕ್ರಮ ಮನೆಗಳು ನಿರ್ಮಾಣವಾಗುತ್ತಿದ್ದ ಕಾಲದಲ್ಲಿಯೇ ಮಂಡಲಿಯ ಅಧಿಕಾರಿಗಳು ಅದನ್ನು ತಡೆಗಟ್ಟಲು ಹಲವಾರು ಬಾರಿ ಪ್ರಯತ್ನ ನಡೆಸಿರುತ್ತಾರಾದರೂ ಅಧಿಕಾರಿಗಳ ಮೇಲೆಯೇ ದೌರ್ಜನ್ಯ ನಡೆಸಿ ರಜಾ ದಿನಗಳಲ್ಲಿ ಅನಧಿಕೃತ ಮನೆಗಳನ್ನು ಕಟ್ಟುವುದನ್ನು ಮುಂದುವರೆಸುತ್ತಾ ಬಂದಿದ್ದರು. ಈ ರೀತಿ ಅತಿಕ್ರಮಣವಾಗುತ್ತಿದ್ದ ಸರ್ಕಾರಿ ಜಮೀನನ್ನು (ಮಂಡಲಿಯ) ರಕ್ಷಿಸುವ ಸಲುವಾಗಿ ದಿನಾಂಕ ೧೭-೨-೮೭ರಂದು ಸದರಿ ಜಮೀನಿನಲ್ಲಿ ಕಟ್ಟಲಾಗಿದ್ದ ಅಕ್ರಮ ಮನೆಗಳನ್ನು ಒಡೆದು ಹಾಕಲಾಯಿತು.